ಉ. ಉದ್ಭವಿಸುವುದಿಲ್ಲ.

ಗದಗ್-ಬಿಜಾಪುರ-ಸೋಲಾಪುರ ರೈಲ್ವೆ ಮಾರ್ಗ

1931(2163) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗದಗ-ಬಿಜಾಪುರ- ಸೋಲಾಪು ನಡುವೆ ರೈಲು ಮಾರ್ಗದ ಉದ್ದಳತೆ ಎಷ್ಟು;

ಆ. ಗದಗ-ಬಿಜಾಪುರ-ಸೋಲಾಪುರವರೆಗಿನ ಮೀಟರ್‌ಗೇಜ್ ರೈಲ್ವೆ ಮಾರ್ಗವನ್ನು ಬ್ರಾಡ್‌ಗೇಜ್ ರೈಲ್ವೆ ಮಾರ್ಗವನ್ನಾಗಿ ಪರಿವರ್ತಿಸುವ ಕೆಲಸ ಯಾವಾಗ ಪ್ರಾರಂಭಿಸಲಾಗಿದೆ;

ಇ. ಈಗಾಗಲೇ ಪರಿವರ್ತನಾ ಕೆಲಸದಲ್ಲಿ ಸಾಧಿಸಿರುವ ಪ್ರಗತಿಯೇನು; ಬಾಕಿ ಉಳಿದ ಕೆಲಸವೆಷ್ಟು;

ಈ. ಬಾಕಿ ಉಳಿದ ಕೆಲಸವನ್ನು ಪೂರ್ತಿಗೊಳಿಸಲು ಸರ್ಕಾರ ಎಷ್ಟು ಸಮಯ ತೆಗೆದುಕೊಳ್ಳುವುದು; ಮುಕ್ತಾಯಕ್ಕೆ ನಿರ್ದಿಷ್ಟ ಕಾಲ ತಿಳಿಸಬಹುದೆ;

ಉ. ಇದುವರೆವಿಗೂ ಕೆಲಸಕ್ಕೆ ಮಾಡಲಾದ ವೆಚ್ಚವೆಷ್ಟು. ಬಾಕಿ ಕಾಮಗಾರಿಯನ್ನು ಪೂರ್ತಿಗೊಳಿಸಲು ಬೇಕಾದ ಅನುದಾನ ವೆಷ್ಟು;

ಊ. ಕೇಂದ್ರ ಮತ್ತು ರಾಜ್ಯಗಳು ಸೇರಿ ಎಷ್ಟೆಷ್ಟು ಹಣ ನೀಡಿವೆ ಮತ್ತು ಮುಂದೆ ಎಷ್ಟೆಷ್ಟು ಹಣ ಒದಗಿಸುತ್ತದೆ.

ಶ್ರೀ ಟಿ. ಜಾನ್ (ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು)

ಅ. 300 ಕಿಲೋ ಮೀಟರ್‌ಗಳು

ಆ. ಗದಗ ಸೋಲಾಪುರ ನಡುವಿನ ರೈಲ್ವೆ ಮಾರ್ಗವನ್ನು ಬ್ರಾಡ್‌ಗೇಜ್ ಆಗಿ ಪರಿವರ್ತಿಸುವ ಕಾರ್ಯವನ್ನು 1995-96ರಲ್ಲಿ ಪ್ರಾರಂಭಿಸಲಾಗಿದೆ.

ಇ. ಹೂಟಗಿ-ಬಿಜಾಪುರ (94 ಕಿ.ಮೀ) ರೈಲು ಮಾರ್ಗ ಪರಿವರ್ತನೆ ಕಾರ್ಯವು ಪೂರ್ಣಗೊಂಡಿದೆ. ಉಳಿದಂತೆ, ಬಿಜಾಪುರ-ಬಾಗಲಕೋಟೆ ವಿಭಾಗದಲ್ಲಿ ಭೂ ಆಗೆತದ ಕಾಮಗಾರಿ ಶೇ. 75 ರಷ್ಟು, ಸಣ್ಣ ಸೇತುವೆಗಳ ನಿರ್ಮಾಣ ಶೇ. 63 ರಷ್ಟು ಪೂರ್ಣಗೊಂಡಿದೆ. ಭಾಗಲಕೋಟೆ-ಗದಗ ಮಾರ್ಗದಲ್ಲಿ ಭೂ ಆಗೆತ ಶೇ. 54 ರಷ್ಟು ಸಣ್ಣ ಸೇತುವೆಗಳ ನಿರ್ಮಾಣ ಶೇ. 32 ರಷ್ಟು ಮುಗಿದಿದೆ. ಈ ಯೋಜನೆಯಲ್ಲಿ ಬರುವ 8 ಪ್ರಮುಖ್ಯ ಸೇತುವೆಗಳ ಪೈಕಿ 7 ಸೇತುವೆಗಳ ಕಾಮಗಾರಿ ಪ್ರಗತಿಯಲ್ಲಿದೆ. 8ನೇ ಸೇತುವೆ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಉಳಿದ 2 ಪ್ರಮುಖ ಸೇತುವೆಗಳ ಬಗ್ಗೆ ಒಂದು ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು ಇನ್ನೊಂದರ ಬಗ್ಗೆ ಟೆಂಡರ್ ಕರೆಯಲಾಗುತ್ತಿದೆ. ಬಿಜಾಪುರ ಬಾಗಲಕೋಟೆ ವಿಭಾಗದಲ್ಲಿ ಜಲ್ಲಿ ಸಂಗ್ರಹಣೆ ಶೇ. 50 ರಷ್ಟು ಪೂರ್ಣಗೊಂಡಿದೆ.

ಈ. ಮೇಲ್ಕಂಡ ವಿಭಾಗಗಳ ಸಂಪೂರ್ಣ ಕಾಮಗಾರಿಗಳು ಕ್ಷಿಪ್ರ ಪ್ರಗತಿಯಲ್ಲಿವೆ.

ಬಿಜಾಪುರ-ಬಾಗಲಕೋಟೆ : ಡಿಸೆಂಬರ್ 2004

ಬಾಗಲಕೋಟೆ-ಗದಗ : ಡಿಸೆಂಬರ್2005

ಉ. ದಿನಾಂಕ : 18.3.2003 ರವರೆಗೆ 152.50 ಕೋಟಿ ರೂಪಾಯಿಗಳು ವೆಚ್ಚವಾಗಿರುತ್ತದೆ. ಬಾಕಿ ಕಾಮಗಾರಿಯನ್ನು ಪೂರ್ತಿಗೊಳಿಸಲು ರೂ. 123.40 ಕೋಟಿ ರೂಗಳ ಅವಶ್ಯವಿದೆ.

ಊ. ಕೇಂದ್ರ ಸರ್ಕಾರವು ರೂ. 150.50 ಕೋಟಿ ಗಳನ್ನು ಹಾಗೂ ರಾಜ್ಯ ಸರ್ಕಾರವು ರೂ. 2.00 ಕೋಟಿಗಳ ವೆಚ್ಚವನ್ನು ಈವರೆವಿಗೆ ಮಾಡಿದೆ. ಮುಂದೆ ಕೇಂದ್ರ ಸರ್ಕಾರವು 2003 04ನೇ ಸಾಲಿನಲ್ಲಿ ರೂ. 10.00 ಕೋಟಿ ಬಿಡುಗಡೆ ಮಾಡುತ್ತದೆ. ರಾಜ್ಯ ಸರ್ಕಾರವು ಅದಕ್ಕೆ ಸಮನಾದ ಮೊತ್ತವನ್ನು ಬಿಡುಗಡೆ ಮಾಡುವುದು.

ಬಿಜಾಪುರ ಜಿಲ್ಲೆ ಝಳಕಿ ಗ್ರಾಮದಲ್ಲಿ ನಡೆದ ಗೋಲಿಬಾರಿನ ನ್ಯಾಯಾಂಗ ತನಿಕೆ

1932(2164) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಿಜಾಪುರ ಜಿಲ್ಲೆ ಝಳಕಿಯಲ್ಲಿ ಗೋಲಿಬಾರ್ ಘಟನೆ ಯಾವಾಗ ಸಂಭವಿಸಿತು;

ಆ. ಗೋಲಿಬಾರ್ ಘಟನೆ ನಡೆದಿರುವುದಕ್ಕೆ ಕಾರಣ ಏನು, ಗೋಲಿಬಾರ್ ಘಟನೆಯಿಂದ ಸಂಭವಿಸಿದ ಸಾವು ನೋವಿನ ಘಟನೆಗಳೆಷ್ಟು;

ಇ. ಗೋಲಿಬಾರಿನ ವಿಷಯವನ್ನು ಕಳೆದ ಬಾರಿ ವಿಧಾನ ಸಭೆ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದಾಗ ಸರ್ಕಾರ ನ್ಯಾಯಂಗ ತನಿಖೆಗೆ ಆದೇಶಿಸಿರುವುದೆ, ಹಾಗಿದ್ದರೆ ತನಿಖೆಯನ್ನು ಆರಂಭಿಸಲಾಗಿದೆಯೇ;

ಈ. ಸರ್ಕಾರ ತನಿಖೆ ನೆಡೆಸಿ ವರದಿ ಸಲ್ಲಿಸುವುದಕ್ಕೆ ಹಾಕಿಕೊಂಡಿದ್ದ ಕಾಲಮಿತಿ ಏನು;

ಉ. ನಿಗದಿತ ಕಾಲಮಿತಿಯಂತೆ ತನಿಖೆಯಿಂದ ಸರ್ಕಾರಕ್ಕೆ ನ್ಯಾಯಾಂಗ ಒದಗಿಸಿರುವ ವರದಿ ಏನು;

ಊ. ವರದಿಯಂತೆ ಸರ್ಕಾರ, ಏನು ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. ದಿನಾಂಕ 4.7.2002ರಂದು ಸಂಭವಿಸಿತು.

ಆ. ಪೋಲೀಸ್ ಗೋಲಿಬಾರ್‌ನಲ್ಲಿ 4 ಜನರು ಸಾವಿಗೀಡಾಗಿದ್ದಾರೆ.

ಇ. ಹೌದು, ನ್ಯಾಯಾಮೂರ್ತಿ ಏನ್. ಸುಬ್ಬಾರಾವ್, ಕೌಟುಂಬಿಕ ನ್ಯಾಯಾಲಯ, ಬಿಜಾಪುರ ಅವರ ನೇತೃತ್ವದಲ್ಲಿ ಅಧಿಸೂಚನೆ ಸಂಖ್ಯೆ: ಒಇ 33 ಪಿಸಿಇ 2002, ದಿನಾಂಕ 26.7.2002ರಲ್ಲಿ ವಿಚಾರಣಾ ಆಯೋಗವನ್ನು ರಚಿಸಲಾಗಿದೆ.

ಈ. 6 ತಿಂಗಳು

ಉ. ವಿಚಾರಣೆಯು ಪ್ರಗತಿಯ ಹಂತದಲ್ಲಿದೆ.